OCTOBER 03, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ, 10 ಲಕ್ಷ ಹೆಕ್ಟರ್ ಬೆಳೆ ಹಾನಿ ಅಂದಾಜು; ಸಮೀಕ್ಷೆ ಬಳಿಕ ರೈತರಿಗೆ ಸೂಕ್ತ ಪರಿಹಾರ, ಮುಖ್ಯಮಂತ್ರಿ ಭರವಸೆ.
- ನಾಡ ಹಬ್ಬ ದಸರಾ ಮಹೋತ್ಸವ, ಸಡಗರ, ಸಂಭ್ರಮಗಳಿಂದ ಸಂಪನ್ನ.
- ಜಿ.ಎಸ್.ಟಿ. ಬಚತ್, ಖಾದಿ ಮಹೋತ್ಸವ, 2025; ನವೆಂಬರ್ 5ರ ವರೆಗೆ, ರಿಯಾಯಿತಿ ಮಾರಾಟ.
- 'ಸ್ವಚ್ಛ ಭಾರತ್, ಸ್ವಸ್ಥ ಭಾರತ್' ಧ್ಯೇಯದೊಂದಿಗೆ, ಫಿಟ್ ಇಂಡಿಯಾ ಫ್ರೀಡಂ ರನ್ ಹಾಗೂ ಸಂಡೇಸ್ ಆನ್ ಬೈಸಿಕಲ್ಸ್ ಜನಾಂದೋಲನ.

<><><>

ಈಗ ವಾರ್ತೆಗಳ ವಿವರ

<><><>

ಅತಿ ಮಳೆಯಿಂದ, ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ, ಅಂದಾಜು, 10 ಲಕ್ಷ ಹೆಕ್ಟರ್ ಬೆಳೆ ಹಾನಿ ಸಂಭವಿಸಿದೆ. ಸಮೀಕ್ಷೆ ಬಳಿಕ, ಅರ್ಹ ರೈತರಿಗೆ ಸೂಕ್ತ ಪರಿಹಾರ ದೊರೆಯಲಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ. ಮೈಸೂರಿನಲ್ಲಿ ಮಾತನಾಡಿದ ಅವರು, ರಾಜ್ಯ ವಿಪತ್ತು ನಿರ್ವಹಣೆ

ಪರಿಹಾರ ನಿಧಿ ಯೋಜನೆ ಅಡಿ, ಖುಷ್ಕಿ ಜಮೀನಿನ ಒಂದು ಹೆಕ್ಟರ್ ಬೆಳೆ ನಷ್ಟಕ್ಕೆ, 17 ಸಾವಿರ ರೂಪಾಯಿ ನಷ್ಟ ಪರಿಹಾರ, ನೀರಾವರಿ ಜಮೀನಿನ ಒಂದು ಹೆಕ್ಟರ್ ಬೆಳೆ ಹಾನಿಗೆ, 17 ಸಾವಿರದ 500 ರೂಪಾಯಿ ಹಾಗೂ ಮಿಶ್ರ ಬೆಳೆ ಜಮೀನಿನ, ಒಂದು ಹೆಕ್ಟರ್ ಬೆಳೆ ನಷ್ಟ ಪರಿಹಾರ, 31 ಸಾವಿರ ರೂಪಾಯಿ ನಿಗದಿ ಪಡಿಸಲಾಗಿದೆ ಎಂದರು.

<><><>

ನಾಡಹಬ್ಬ ದಸರಾ ಮಹೋತ್ಸವ, ಮೈಸೂರಿನಲ್ಲಿ, ಚಿನ್ನದ ಅಂಬಾರಿಯಲ್ಲಿ ವಿರಾಜಮಾನ ನಾಡದೇವಿ, ತಾಯಿ ಭುವನೇಶ್ವರಿಯ ಭವ್ಯ ಮೆರವಣಿಗೆಯೊಂದಿಗೆ, ಸಂಪನ್ನಗೊಂಡಿತು. ರಾತ್ರಿ ಬನ್ನಿಮಂಟಪದಲ್ಲಿ ಪಂಜಿನ ಕವಾಯತು ಜರುಗಿತು. ರಾಜ್ಯಪಾಲ ಥಾವರಚಂದ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡಿದ್ದರು.

ಮಂಗಳೂರು ದಸರಾ ಮಹೋತ್ಸವದ, ಭವ್ಯ ಶೋಭಾಯಾತ್ರೆ, ಇನ್ನು ಕೆಲವೇ ನಿಮಿಷಗಳಲ್ಲಿ ಸಂಪನ್ನಗೊಳ್ಳಲಿದೆ. ಕುದ್ರೋಳಿ ಗೋಕರ್ಣನಾಥೇಶ್ವರ ಕ್ಷೇತ್ರದಲ್ಲಿ, ದೇವಿ ಶಾರದೆ ಸೇರಿದಂತೆ, ನವದುರ್ಗೆಯರನ್ನು ಹೊತ್ತ ಅಲಂಕೃತ ವಾಹನಗಳು, ನಗರದ ರಾಜಬೀದಿಗಳಲ್ಲಿ ಸಾಗಿ, ಕ್ಷೇತ್ರದ ಕೆರೆಯಲ್ಲಿ ವಿಸರ್ಜನೆಗೊಳ್ಳಲಿವೆ. ಡೊಳ್ಳು ಕುಣಿತ, ಹುಲಿವೇಶ, ಕಂಗೀಲು, ತಮಟೆ ವಾದನ, ವೀರಗಾಸೆ ಶೋಭಾಯಾತ್ರೆಯ ಮೆರಗನ್ನು ಹೆಚ್ಚಿಸಿವೆ.

<><><>

ರಾಯಚೂರು ಮಹಾನಗರ ಪಾಲಿಕೆ ವತಿಯಿಂದ, ನಾಡಹಬ್ಬ ದಸರಾ ಅಂಗವಾಗಿ, ನಾಡದೇವಿಯ ಭವ್ಯ ಮೆರವಣಿಗೆಗೆ ಶಾಸಕ ಎಸ್. ಶಿವರಾಜ ಪಾಟೀಲ ಚಾಲನೆ ನೀಡಿದರು. ಮಹಿಳೆಯರು ಪೂರ್ಣ ಕುಂಭ ಹೊತ್ತು ಸಾಗಿದರು. ಹಲಗೆ, ಡೊಳ್ಳಿನ ಮೇಳ, ಕೋಲಾಟಗಳಿಂದ ಮೆರವಣಿಗೆಯ ಸೊಬಗು ಹೆಚ್ಚಿತು.

<><><>

ಬ್ರಿಟಿಷರ ವಿರುದ್ಧದ, ಸ್ವದೇಶಿ ಚಳವಳಿಗಳನ್ನು, ಜನಾಂದೋಲನವಾಗಿ ರೂಪಿಸಿದ ಹಿರಿಮೆ, ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರಿಗೆ ಸಲ್ಲುತ್ತದೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ, ಇಂಧನ

ಮೂಲಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಹೇಳಿದ್ದಾರೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸುಪರ್ದಿಯ, ಧಾರವಾಡದ ನೂತನ ಗಾಂಧಿ ಭವನದ ಸಭಾಂಗಣದಲ್ಲಿ, ಮಹಾತ್ಮ ಗಾಂಧಿ ಹಾಗೂ ಲಾಲ್ ಬಹಾದ್ದೂರ್ ಶಾಸ್ತ್ರಿ ಜಯಂತ್ಯುತ್ಸವದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು.

<><><>

ಪ್ರಲ್ಹಾದ ಜೋಶಿ ಧ್ವನಿ 44 ಸೆಕೆಂದುಗಳು

<><><>

ನವಲಗುಂದ ಶಾಸಕ, ಎನ್.ಎಚ್ ಕೋನರೆಡ್ಡಿ ಮಾತನಾಡಿ, ಮಹಾತ್ಮ ಗಾಂಧೀಜಿ, ಮಾನವೀಯ ಮೌಲ್ಯ, ಸ್ವಚ್ಛತೆ ಹಾಗೂ ಗ್ರಾಮ ಸ್ವರಾಜ್ಯಕ್ಕೆ ಆದ್ಯತೆ ನೀಡಿದರು, ಎಂದರು. ನೈಋತ್ಯ ರೇಲ್ವೆ, ಹುಬ್ಬಳ್ಳಿ ವಿಭಾಗ, ಮಹಾತ್ಮ ಗಾಂಧಿ ಜಯಂತಿ ಹಿನ್ನೆಲೆ, 'ಸ್ವಚ್ಛತಾ ಹಿ ಸೇವಾ' ಅಭಿಯಾನದ ಅಂಗವಾಗಿ, ಶ್ರೀ ಸಿದ್ಧಾರೂಢ ಸ್ವಾಮೀಜಿ ರೇಲ್ವೆ ನಿಲ್ದಾಣದ ಆವರಣದಲ್ಲಿ, ಶ್ರಮದಾನ ಆಯೋಜಿಸಿತ್ತು. ಭಾರತ ಸೇವಾದಳ, ಕಲಬುರಗಿಯಲ್ಲಿ, ಗಾಂಧಿ ಜಯಂತಿ ಅಂಗವಾಗಿ, ಸರ್ವಧರ್ಮ ಪ್ರಾರ್ಥನೆ ಹಾಗೂ ಸದ್ಭಾವನಾ ಗೀತೆಗಳ ಗಾಯನ ಕಾರ್ಯಕ್ರಮ, ಆಯೋಜಿಸಿತ್ತು. ಮಹಾತ್ಮ ಗಾಂಧಿ ಜಯಂತಿ ಹಾಗೂ ಲಾಲ್ ಬಹಾದ್ದೂರ್ ಶಾಸ್ತ್ರಿ ಜಯಂತ್ಯುತ್ಸವಕ್ಕೆ, ವಿಜಯನಗರ ಜಿಲ್ಲೆ, ಹೊಸಪೇಟೆಯ ಸಹಾಯಕ ಆಯುಕ್ತ ಪಿ.ವಿವೇಕಾನಂದ ಚಾಲನೆ ನೀಡಿದರು. ಉತ್ತರಕನ್ನಡ ಜಿಲ್ಲೆ, ಕಾರವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಆಯೋಜಿಸಿದ್ದ, ಮಹಾತ್ಮ ಗಾಂಧಿ ಹಾಗೂ ಲಾಲ ಬಹಾದ್ದೂರ್ ಶಾಸ್ತ್ರಿ ಜಯಂತಿ ಕಾರ್ಯಕ್ರಮದಲ್ಲಿ, ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ, ಗೌರವ ನಮನ ಸಲ್ಲಿಸಿದರು.ಯಾದಗಿರಿಯ ಪದವಿ ಮಹಾವಿದ್ಯಾಲಯದಲ್ಲಿ, ಜಿಲ್ಲಾಧಿಕಾರಿ ಹರ್ಷಲ್ ಭೋಯರ್, ಗಾಂಧೀಜಿ ಹಾಗೂ ಶಾಸ್ತ್ರೀಜಿ ಜಯಂತ್ಯುತ್ಸವಗಳಿಗೆ ಚಾಲನೆ ನೀಡಿ, ಇಬ್ಬರೂ ಆದರ್ಶ ನಾಯಕರ, ಜೀವನ ಸಂದೇಶಗಳನ್ನು ಅಳವಡಿಸಿಕೊಳ್ಳುವಂತೆ, ವಿದ್ಯಾರ್ಥಿಗಳಿಗೆ ಕರೆ ನೀಡಿದರು.

<><><>

<><><>

ಈಗ ವಾಣಿಜ್ಯ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(32 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

ಸ್ವದೇಶಿ ವಸ್ತುಗಳ ಖರೀದಿ ಮತ್ತು ಬಳಕೆಯನ್ನು ಪ್ರೋತ್ಸಾಹಿಸುವ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪರಿಕಲ್ಪನೆ ಮತ್ತು ಮಹತ್ವಾಕಾಂಕ್ಷೆಯ, 'ವೋಕಲ್ ಫಾರ್ ಲೋಕಲ್' ಅಭಿಯಾನದ ಮೂಲಕ, ಮೇಕ್ ಇನ ಇಂಡಿಯಾ, ಮೇಡ್ ಇನ್ ಇಂಡಿಯಾ ಉಪಕ್ರಮಗಳಿಗೆ, ಖಾದಿ ಮತ್ತು ಗ್ರಾಮೋದ್ಯೋಗ ಬಲ ತುಂಬಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ತಿಳಿಸಿದ್ದಾರೆ. ಧಾರವಾಡದ ಸುಭಾಷ್ ರಸ್ತೆಯ, ಖಾದಿ ಮತ್ತು ಗ್ರಾಮೋದ್ಯೋಗ ಕರಕುಶಲ ವಸ್ತುಗಳ ಮಾರಾಟ ಮಳಿಗೆಗೆ ಭೇಟಿ ನೀಡಿ, ಅವರು ಮಾತನಾಡಿದರು. ಅಕ್ಟೋಬರ್ 2 ಗಾಂಧಿ ಜಯಂತಿಯಿಂದ, ನವೆಂಬರ್ 5ರ ವರೆಗೆ, ಖಾದಿ ಉಡುಪುಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡುವ, ಖಾದಿ ಮಹೋತ್ಸವ ಆಯೋಜಿತವಾಗಿದೆ. ಸರಕು ಮತ್ತು ಸೇವಾ ತೆರಿಗೆ – ಬಚತ್ ಉತ್ಸವದಡಿ, ಖಾದಿ ಮಹೋತ್ಸವಕ್ಕೆ ಕೇಂದ್ರ ಸಹಕಾರ ಖಾತೆ ಸಚಿವ, ಅಮಿತ ಶಾ ಹೊಸ ದಿಲ್ಲಿಯಲ್ಲಿ ಚಾಲನೆ ನೀಡಿದ್ದಾರೆ. ಖಾದಿ ಬಟ್ಟೆಗಳ ಮೇಲೆ ಶೇಕಡ 20 ರಷ್ಟು, ಖಾದಿ ಗ್ರಾಮೋದ್ಯೋಗ ಕೇಂದ್ರಗಳು ತಯಾರಿಸಿದ ವಸ್ತುಗಳ ಮೇಲೆ, ಶೇಕಡ 10 ರಷ್ಟು ರಿಯಾಯಿತಿ ದೊರೆಯುತ್ತಿದೆ. ಸ್ವದೇಶಿ ವಸ್ತುಗಳ ಬಳಕೆಯನ್ನು ಹೆಚ್ಚಿಸೋಣ; ಭಾರತದಲ್ಲಿಯೇ ತಯಾರಾದ ಸ್ವದೇಶಿ ವಸ್ತುಗಳನ್ನೇ ಖರೀದಿಸೋಣ, ಎಂದರು.

<><><>

'ಸ್ವಚ್ಛ ಭಾರತ, ಸ್ವಸ್ಥ ಭಾರತ' ಧ್ಯೇಯದೊಂದಿಗೆ, ಈ ತಿಂಗಳ 31ರ ವರೆಗೆ, 'ಫಿಟ್ ಇಂಡಿಯಾ ಸ್ವಚ್ಛತಾ ಫ್ರೀಡಂ ರನ್ 6.0' ಆಯೋಜಿತವಾಗಿದೆ. ವಾರಾಂತ್ಯದ 5, 12, 19 ಹಾಗೂ 26 ನೇ ತಾರೀಖಿನಂದು, 'ಸಂಡೇಸ್ ಆನ್ ಬೈಸಿಕಲ್ಸ್', ಪರಿಸರ ಪ್ರಜ್ಞೆ ಜಾಗ್ರತಿ ಹಾಗೂ ಇಂಗಾಲದ ಹೆಜ್ಜೆ ಗುರುತು ನಿಯಂತ್ರಿಸುವ ಅಭಿಯಾನಕ್ಕೆ, ಸೈಕ್ಲಿಸ್ಟ್‌ಗಳು ಹಾಗೂ ಸ್ಥಳೀಯ ಸೈಕ್ಲಿಸ್ಟ್ ಅಸೋಶಿಯೇಷನ್‌ಗಳು

ಕೈಜೋಡಿಸಿವೆ. ನಾಡಿನ ಐತಿಹಾಸಿಕ ಸ್ಮಾರಕಗಳಲ್ಲಿ, ಸ್ವಚ್ಛತಾ ಕಾರ್ಯಕ್ರಮ, ಫಿಟ್ ಇಂಡಿಯಾ ಓಟದ ವಿಡಿಯೋ, ಚಿತ್ರ, ಬರೆಹಗಳ ಮಾಹಿತಿಯನ್ನು #SwcchaBharath - SwasthBharath ಹಾಗೂ #Run4India ಬಳಸಿ ಹಂಚಿಕೊಳ್ಳಬಹುದು. fitindia.gov.in ಜಾಲತಾಣದಲ್ಲಿ ಕಾರ್ಯಕ್ರಮದ ವಿವರಗಳನ್ನು ದಾಖಲಿಸಲು, ಕೋರಲಾಗಿದೆ.

<><><>

ಸರಕು ಮತ್ತ ಸೇವಾ ತೆರಿಗೆ, ನೆಕ್ಸ್ಟ್ ಜೆನ್ ಜಿ.ಎಸ್.ಟಿ. 2.0 ಪರಿಷ್ಕೃತ ಆವೃತ್ತಿ ಜಾರಿ ಸಂಬಂಧಿತ, ಪ್ರಶ್ನೆ ಮತ್ತು ದೂರುಗಳನ್ನು ಪರಿಹರಿಸಲು, ರಾಷ್ಟ್ರೀಯ ಗ್ರಾಹಕ ಸಹಾಯವಾಣಿ ಕಾರ್ಯಾರಂಭಿಸಿದೆ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ರಾಷ್ಟ್ರೀಯ ಗ್ರಾಹಕ ಸಹಾಯವಾಣಿ ಸಂಖ್ಯೆ 1–9–1–5, ಉಮಂಗ ಆ್ಯಪ್, ವ್ಯಾಟ್ಸಪ್ ಹಾಗೂ ಎಸ್.ಎಂ.ಎಸ್.ಗಳ ಮೂಲಕ, ಕೇಂದ್ರ ಗ್ರಾಹಕ ಹಕ್ಕು ರಕ್ಷಣಾ ಪ್ರಾಧಿಕಾರದ ಗಮನಕ್ಕೆ ತರಬಹುದು.

<><><>

ಕೇಂದ್ರ ಆರೋಗ್ಯ ಸಚಿವಾಲಯ ಆಯೋಜಿಸಿರುವ, 'ಸ್ವಸ್ಥ ನಾರಿ; ಸಶಕ್ತ ಪರಿವಾರ' ಅಭಿಯಾನ, ದೇಶಾದ್ಯಂತ ಒಟ್ಟು 16 ಲಕ್ಷ ಆರೋಗ್ಯ ಶಿಬಿರಗಳನ್ನು ಸಂಘಟಿಸಿ, 6 ಕೋಟಿ ಮಹಿಳೆಯರೂ ಸೇರಿದಂತೆ, 9 ಕೋಟಿ ಜನ, ಚಿಕಿತ್ಸೆ ಮತ್ತು ಆರೈಕೆ ಪ್ರಯೋಜನ ಪಡೆದಿದ್ದಾರೆ. ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕು, ಬೇಗೂರು ಗ್ರಾಮದ, ಸಮುದಾಯ ಆರೋಗ್ಯ ಕೇಂದ್ರದಲ್ಲಿ, 'ಸ್ವಸ್ಥ ನಾರಿ; ಸಶಕ್ತ ಪರಿವಾರ' ಅಭಿಯಾನಕ್ಕೆ, ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಜಯಮ್ಮ ಚಾಲನೆ ನೀಡಿದರು.

<><><>

ರಾಜ್ಯದ, ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳ ಅಧಿಕಾರಾವಧಿ, ಈ ತಿಂಗಳು ಕೊನೆಗೊಳ್ಳಲಿದೆ. ರಾಜ್ಯ ಚುನಾವಣಾ ಆಯುಕ್ತ ಸಂಗ್ರೇಶಿ, ಕೋಲಾರದಲ್ಲಿ ಈ ವಿಷಯ ತಿಳಿಸಿ, ರಾಜ್ಯ ಸರ್ಕಾರ, ಕ್ಷೇತ್ರವಾರು ಅಭ್ಯರ್ಥಿಗಳ ಮೀಸಲಾತಿ ಪಟ್ಟಿ ಪ್ರಕಟಿಸಿದ ಕೂಡಲೇ, ಸ್ಥಳೀಯ ಚುನಾವಣೆಗಳಿಗೆ, ಸಿದ್ಧತೆ ಕೈಗೊಳ್ಳಲಾಗುವುದು ಎಂದರು. ಪ್ರತಿ ವರ್ಷ ಮತದಾರರ ಪಟ್ಟಿ ಪರಿಷ್ಕರಿಸಲಾಗುತ್ತಿದ್ದು, ಅರ್ಹ ಮತದಾರರು ಮತದಾನದ ಅವಕಾಶದಿಂದ ವಂಚಿತರಾಗಬಾರದು. ಮಾಲೂರು ವಿಧಾನಸಭಾ ಕ್ಷೇತ್ರದ, ಮರು ಮತ ಎಣಿಕೆ, ಕೇಂದ್ರ ಚುಣಾವಣಾ ಆಯೋಗದ ವ್ಯಾಪ್ತಿಗೆ ಒಳಪಟ್ಟಿದ್ದು, ಆಯೋಗ ಸೂಕ್ತ ನಿರ್ಧಾರ ಕೈಗೊಳ್ಳಲಿದೆ ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ, 10 ಲಕ್ಷ ಹೆಕ್ಟರ್ ಬೆಳೆ ಹಾನಿ ಅಂದಾಜು; ಸಮೀಕ್ಷೆ ಬಳಿಕ ರೈತರಿಗೆ ಸೂಕ್ತ ಪರಿಹಾರ, ಮುಖ್ಯಮಂತ್ರಿ ಭರವಸೆ.

ನಾಡ ಹಬ್ಬ ದಸರಾ ಮಹೋತ್ಸವ, ಸಡಗರ, ಸಂಭ್ರಮಗಳಿಂದ ಸಂಪನ್ನ.

ಜಿ.ಎಸ್.ಟಿ. ಬಚತ್, ಖಾದಿ ಮಹೋತ್ಸವ, 2025; ನವೆಂಬರ್ 5ರ ವರೆಗೆ, ರಿಯಾಯಿತಿ ಮಾರಾಟ.

'ಸ್ವಚ್ಛ ಭಾರತ್, ಸ್ವಸ್ಥ ಭಾರತ್' ಧ್ಯೇಯದೊಂದಿಗೆ, ಫಿಟ್ ಇಂಡಿಯಾ ಫ್ರೀಡಂ ರನ್ ಹಾಗೂ ಸಂಡೇಸ್ ಆನ್ ಬೈಸಿಕಲ್ಸ್ ಜನಾಂದೋಲನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>